Slums in Bangalore City

219. SRI S. S. ARAKERI (Balloli)—Will the Minister for Municipal Administration be pleased to state:—

(*a*) the total number of slums in Bangalore City ;

(*b*) the number of slums recognised by the Bangalore City Corporation ;

(*c*) the number of slums not recognised ;

(*d*) the amount spent during the last 3 years on slum clearance in Bangalore City ;

(*e*) the total papulation in slums in Corporation area of Bangalore City ?

SRI H. C. SRIKANTAIAH (Minister for Municipal Administration)—

(*a*) 180.

(*b*) & (*c*) The recognition of slums by the Bangalore City Corporation does not arise. Government will notify the areas as slum areas and slum clearance areas under Sections 3 and 11 respectively of the Karnataka Slum Areas (Improvement & Clearance) Act, 1973 when those areas fulfil the condtions prescribed in the K.S A. (I. & C.) Act. The Bangalore City Corporation has also taken up improvement works on the slums existing on Corporation land.

(*d*) —

		Rs. P.
1975-76	—	24,09,920,00
1976-77	—	37,99,602.00
1977-78	—	35,47,651.00
Total	—	97 57,173.00

(*e*) 1,65,533.

ಶ್ರೀ ಎಸ್. ಎಸ್. ಅರಕೇರಿ.—ನನ್ನ ಕೊನೆಯ ಪ್ರಶ್ನೆಗೆ ಉತ್ತರವಾಗಿ ೧,೬೫,೫೩೩ ಎಂದು ಹೇಳಿದ್ದೀರಿ. ಇದು ಸರಿಯಾದ ಸಂಖ್ಯೆಯೇ ಹೇಗೆ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಸರಿಯಾದ ಸಂಖ್ಯೆ ಎಂದೇ ಕೊಟ್ಟಿರುವುದು.

ಶ್ರೀ ಎಸ್. ಎಸ್. ಅರಕೇರಿ.—ಈ ೧೬೦ ಕೊಳಚೆ ಪ್ರದೇಶಗಳಲ್ಲಿ ಎಷ್ಟೆಷ್ಟು ಮನೆಗಳನ್ನು ಆಯಾ ಕೊಳಚೆ ಪ್ರದೇಶಗಳಲ್ಲಿ ಅಲ್ಲಿನ ಜನರಿಗೆ ಕಟ್ಟಿಸಿಕೊಟ್ಟಿದ್ದೀರಿ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ—ಒಂದೊಂದು ಕೊಳಚೆ ಪ್ರದೇಶಗಳಲ್ಲಿಯೂ ಎಷ್ಟೆಷ್ಟು ಮನೆಗಳನ್ನು ಕಟ್ಟಿಸಿದ್ದೀರಿ ಎಂಬ ಬಗ್ಗೆ ನನಗೆ ಉತ್ತರಬೇಕು ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಕೊಳಚೆ ನಿರ್ಮೂಲನಕ್ಕಾಗಿ ಕಳೆದ ೩ ವರ್ಷಗಳಲ್ಲಿ ಖರ್ಚಾದ ಹಣದ ವಿವರವನ್ನು ಇಲ್ಲಿ ಕೊಡಲಾಗಿದೆ. ಆದರೆ ಎಷ್ಟೆಷ್ಟು ಮನೆಗಳನ್ನು ಕಟ್ಟಿಸಲಾಗಿದೆ, ರಸ್ತೆಗಳಿಗೆ ಎಷ್ಟು ಹಣ ಖರ್ಚಾಗಿದೆ ಎಂಬ ಬಗ್ಗೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಎಸ್. ಎಸ್, ಅರಕೇರಿ—೯೭ ಲಕ್ಷ ಚಿಲ್ಲರೆ ರೂಪಾಯಿ ಪಣ ಖರ್ಚು ಮಾಡಿದ ಮೇಲೆ ಎಷ್ಟು ಜನರನ್ನು ರಿಯಾಬಿಲಿಟೇಟ್ ಮಾಡಿದ್ದೀರಿ ಮತ್ತು ಯಾವ ರೀತಿ ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ—ಹ್ಯಾಬಿಲಿಟೇಷನ್ ಎಂದರೆ, ಕೊಳಚೆ ನಿರ್ಮೂಲನ ಮಾಡಿ, ಅಲ್ಲಿ ಮನೆಗಳನ್ನು ಕಟ್ಟಿಸಿಕೊಡುವುದು, ರಸ್ತೆಗಳನ್ನು ಮಾಡಿಕೊಡುವುದು, ನೀರಿನ ಮತ್ತು ದೀಪದ ಸೌಲಭ್ಯ ಕಲ್ಪಿಸಿಕೊಡುವುದು, ಆದರೆ ಇಲ್ಲಿ ಎಷ್ಟೆಷ್ಟು ಮನೆಗಳನ್ನು ಕಟ್ಟಿಸಿಕೊಡಲಾಗಿದೆ ಎಂಬ ಬಗ್ಗೆ ನನ್ನ ಪಟ್ಟಿರ ಈಗ ವಿವರಗಳಿಲ್ಲ.

ಶ್ರೀ ಎಸ್. ಎಸ್. ಅರಕೇರಿ—೧,೬೫೫,೫೫೩ ಜನರ ಪೈಕಿ ಹರಿಜನರು ಎಷ್ಟು ಇದ್ದಾರೆಂಬುದನ್ನು ಹೇಳುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ—ಆ ಅಂಕಿಅಂಶಗಳಿಲ್ಲ. ಇಲ್ಲಿರತಕ್ಕಂಥವರು ವೀಕರ್‌ಸೆಕ್ಷನ್ ಜನರೇ ಜಾಸ್ತಿ. ಆದರೆ ಹರಿಜನರೆಷ್ಟು ಮತ್ತು ಇತರೆಯವರೆಷ್ಟು ಎಂಬ ವಿವರ ನನ್ನ ಪಟ್ಟಿರ ಈಗ ಇಲ್ಲ.

ಅಧ್ಯಕ್ಷರು—ಆ ವಿವರಗಳನ್ನು ತರಿಸಿಕೊಡಿ.

SRI S. S. ARAKERI—The very purpose of putting my question is how many families in each slum have been rehabilitated. The Hon. Minister is unable to answer.

SRI H. C. SRIKANTIAH—There are 161 slums and another 19 slums have been recently identified. The total comes to 180. Out of this, 53 slums have been improved by the Bangalore City Corporation and another 13 by the B.D.A. A total of 66 slums have been improved. ಒಟ್ಟು ೫೩ ಮತ್ತು ೧೩ ಹೀಗೆ ೬೬ ಸ್ಲಮ್‌ಗಳನ್ನು ಇಂಪ್ರೂವ್ ಮಾಡಿದ್ದೇವೆ. ಆದರೆ ಇಲ್ಲಿ ಮನೆಗಳನ್ನು ಎಷ್ಟು ಕಟ್ಟಿಸಲಾಗಿದೆ, ಹರಿಜನರೆಷ್ಟಿದ್ದಾರೆ ಎಂಬ ಬಗ್ಗೆ ತಾವು ಬೇರೆ ಪ್ರಶ್ನೆ ಕೇಳಿದರೆ ತಮಗೆ ಉತ್ತರ ಒದಗಿಸುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ—ಸ್ಲಮ್ ಕ್ಲಿಯರೆನ್ಸ್ ಬೋರ್ಡು ಮತ್ತು ಕಾರ್ಪೊರೇಷನ್ ಇವೆರಡರ ಮಧ್ಯ ಒಂದು ರೀತಿಯ ತಿಕ್ಕಾಟ ನಡೆದಿರುವುದರಿಂದ ಈ ಜನರ ಕಲ್ಯಾಣವಾಗುತ್ತಿಲ್ಲ. ಈ ಜನರ ಕಲ್ಯಾಣವನ್ನು ಈ ಕಾರ್ಪೋರೇಷನ್ ಅಥವಾ ಆಥವಾ ಸ್ಲಮ್ ಕ್ಲಿಯರೆನ್ಸ್ ಬೋರ್ಡಿನವರಾಗಲೀ ಬಯಸುವುದಿಲ್ಲ. ಇವೆರಡರ ಮಧ್ಯೆ ಒಂದು ರೀತಿಯ ನಾಟಕ ನಡೆದಿದೆ. ಇದಕ್ಕೆ ತಮ್ಮ ಅಭಿಪ್ರಾಯವೇನು ? ಮತ್ತು ಇವೆರಡನ್ನೂ ಸಮನ್ವಯ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ಹೇಳುತ್ತೀರಾ ?

ಹೆಚ್. ಸಿ. ಶ್ರೀಕಂಠಯ್ಯ—ಇಲ್ಲಿ ನಾಟಕೀಯವಾದ ಪ್ರಶ್ನೆ ಏನೂ ಇಲ್ಲ, ಈ ಕೊಳಚೆ ಪ್ರದೇಶಗಳ ಜೋರಾಗಿ ನಾವು ಒಟ್ಟಿಗೆ ಸಂತೋಷಪಡುತ್ತೇವೆ. ಕಾರ್ಪೊರೇಷನ್ ಮೂಲಕ, ಸ್ಲಮ್ ಕ್ಲಿಯರೆನ್ಸ್ ಬೋರ್ಡಿನ ಮೂಲಕ ಮತ್ತು ಬಿ.ಡಿ.ಎ. ಮೂಲಕ ಇವುಗಳನ್ನು ಕ್ಲಿಯರೆನ್ಸ್ ಮಾಡಿಸುವುದು ಸರ್ಕಾರದ ಮೊದಲನೆಯ ಕರ್ತವ್ಯವಾಗಿದೆ. ಈಗ ಸ್ಲಮ್ ಕ್ಲಿಯರೆನ್ಸ್ ಬೋರ್ಡಿನ್ನು ಪುನರ್‌ರಚನೆ ಮಾಡಲಾಗಿದೆ. ಜೊತೆಗೆ ಬಿ.ಡಿ.ಎ. ಅವರು ಮತ್ತು ಕಾರ್ಪೊರೇಷನ್ ಅವರು ಈ ಬಗ್ಗೆ ಯಾವ ಯಾವ ಕಾರ್ಯಕ್ರಮ ಕೈಗೊಳ್ಳಬೇಕೆಂಬ ಬಗ್ಗೆ ಪೂರ್ಣವಾದ ಚರ್ಚೆಮಾಡಿ ನಂತರ ಆಯಾಯಗಳಿಗೆ ಸಧ್ಯದಲ್ಲಿರಿಸೇ ಸೂಚನೆಯನ್ನು ಕೊಡಲಿದ್ದೇವೆ.

ಶ್ರೀ. ರಾಮದೇವ್—ಕಳೆದ ೩ ವರ್ಷಗಳಲ್ಲಿ ೯೭ ಲಕ್ಷ ಚಿಲ್ಲರೆ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡಿದ್ದೀರಿ. ಇಲ್ಲಿರತಕ್ಕಂಥ ಜನ ಸಂಖ್ಯೆಗೆ ಇದನ್ನು ಹೋಲಿಕೆ ಮಾಡಿದರೆ ಒಬ್ಬರಿಗೆ ೨೦ ರೂಪಾಯಿಗಳ ಪ್ರಕಾರ ಖರ್ಚು ಮಾಡಿದಂತಾಯಿತು. ೩ ವರ್ಷದ ಮೊದಲು ೧೨೦ ಕೊಳಚೆ ಪ್ರದೇಶಗಳಿದ್ದವು. ಈಗ ಅವು ೧೮೦ ಆಗಿವೆ. ಬಂದೊಂದು ಕೊಳಚೆ ಪ್ರದೇಶಗಳು ಹೊಸದಾಗಿ ಪ್ರತಿಯಂಥಾದಾಗ ಅವುಗಳಿಗೆ ದೇವರಾಜನಗರ, ಇಂದಿರಾನಗರ, ಸಂಜಯನಗರ, ನಟರಾಜನಗರ ಎಂದು ಹೆಸರಿಡುತ್ತಾರೆ,

ಶ್ರೀಕಂಠಯ್ಯನವರ ಹೆಸರಿನಲ್ಲಿಯೂ ಒಂದು ಬಂದಿರಬಹುದೆಂದು ಕಾಣುತ್ತದೆ, ಹೀಗೆ ಹೊಸಹೊಸ ಸ್ಲಮ್‌ಗಳು ಬರುವುದನ್ನು ತಾವು ತಪ್ಪಿಸಬೇಕು. ಈ ಬಗ್ಗೆ ತಾವು ತೀವ್ರವಾದಂಥ ಕ್ರಮವನ್ನು ಕೈಕೊಳ್ಳುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ—ಈ ಬಗ್ಗೆ ಸರ್ಕಾರ ಸೂಕ್ತಕ್ರಮ ಕೈಕೊಳ್ಳುತ್ತದೆ. ಆದರೂ ಸಹ ಅನಿವಾರ್ಯವಾಗಿ ಇವು ಬೆಳೆಯುತ್ತಿವೆ. ರಾತ್ರಿ ಕಾಲದಲ್ಲಿ ಏನೂ ಇರುವುದಿಲ್ಲ. ಆದರೆ ಬೆಳಿಗ್ಗೆ ನೋಡಿದಾಗ ಕೆಲವರು ಕೆಲವು ಗುಡಿಸಲುಗಳನ್ನು ಹಾಕಿಕೊಂಡಿರುತ್ತಾರೆ. ಇದಕ್ಕೆ ಕಾರಣರು ಯಾರು ಎಂದು ಹೇಳುವುದು ಕಷ್ಟ. ಇದನ್ನು ತಡೆಗಟ್ಟುವುದು ಕಷ್ಟವೆಂಬುದು ಮಾನ್ಯ ಸದಸ್ಯರಿಗೂ ಗೊತ್ತಿನೆ. ಆದರೂ ಸಹ ಹೊಸದಾಗಿ ಸ್ಲಮ್‌ಗಳು ಬರುವುದನ್ನು ಸರ್ಕಾರ ತಡೆಗಟ್ಟುತ್ತದೆ ಮತ್ತು ಈಗ ಇರುವುದನ್ನು ಇಂಪ್ರೂವ್ ಮಾಡುವುದಕ್ಕೆ ಸರ್ಕಾರ ಎಲ್ಲ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತದೆಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್—ಈಗ ಕೆಲವು ಕಡೆ ಕೆಲವಾರು ಕೆಲಸಗಳನ್ನು ತೆಗೆದುಕೊಂಡು ಅಲ್ಲಿನವರಿಗೆ ಜಾಗಗಳನ್ನು ಖಾಯಂ ಆಗಿ ಕೊಟ್ಟಿದ್ದೀರಿ. ಆದರೆ ಅವರಿಗೆ ಇನ್ನೂ ಪಟ್ಟಾ ಕೊಟ್ಟಿಲ್ಲ. ಇದರಿಂದ ಅವರಿಗೆ ಆಧಾರವಿಲ್ಲದೆ ಸಾಲ ತೆಗೆದುಕೊಳ್ಳಲು ಕಷ್ಟವಾಗಿದೆ. ಇದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ- ಅದು ನನ್ನ ಗಮನಕ್ಕೆ ಬಂದಿಲ್ಲ, ಮಾನ್ಯ ಸದಸ್ಯರು ಎಲ್ಲಿ ಆ ರೀತಿ ಆಗಿದೆ ಎಂಬುದನ್ನು ನನ್ನ ಗಮನಕ್ಕೆ ತಂದರೆ, ನಾನು ಪರಿಶೀಲಿಸಿ ಹಕ್ಕು ಪತ್ರಗಳನ್ನು ಕೊಡಿಸುತ್ತೇನೆ.

SRI A. LAKSHMISAGAR—Is there any difficulty in preventing new slums coming upon Corporation lands, private lands and Government lands by taking stringent action within the frame work of the law.

SRI H. C. SRIKANTAIAH—We can take stringent action within the Corporation limits but how can we prevent slums coming up on private lands ?

ಶ್ರೀ ಎ. ಲಕ್ಷ್ಮೀಸಾಗರ್—ಖಾಸಗಿ ಜಮೀನಿನಲ್ಲಿ ಲೈಸೆನ್ಸ್ ಇಲ್ಲದ ಮನೆಗಳನ್ನಾಗಲಿ, ಗುಡಿಸಲು ಗಳನ್ನಾಗಲೀ ಕಟ್ಟುವುದಕ್ಕೆ ಆಗುವುದಿಲ್ಲ ಎಂದು ಕಾನೂನು ಪ್ರಕಾರ ರಿಸ್ಟ್ರಿಕ್ಟ್ ಮಾಡುವುದಕ್ಕೆ ಅವಕಾಶ ಇದೆ. ಇದನ್ನು ಜಾರಿಗೆ ತಂದರೆ ಯಾರೂ ಹೋಗುವುದಿಲ್ಲ. ಒಂದು ವೇಳೆ ಆ ರೀತಿ ಮನೆಯನ್ನು ಕಟ್ಟಿದರೆ, ಅಥವಾ ಗುಡಿಸಲನ್ನು ಹಾಕಿದರೆ ಅದನ್ನು ಕಿತ್ತು ಹಾಕಿ ಶಿಕ್ಷೆ ವಿಧಿಸಿದರೆ ಆ ರೀತಿ ಮಾಡುವುದಕ್ಕೆ ಯಾರೂ ಹೋಗುವುದಿಲ್ಲ. ಕೊಳಚೆ ಪ್ರದೇಶವನ್ನು ನಿರ್ಮೂಲನ ಮಾಡುವುದಕ್ಕೆ ಅದು ಮೊದಲನೆಯ ಕ್ರಮ. ಅದನ್ನು ಮಾಡದಿದ್ದರೆ ಸರಿ ಹೋಗುವುದಿಲ್ಲ. ಹೋದ ಚುನಾವಣೆಯಿಂದ ಈಚೆಗೆ ಬೆಂಗಳೂರು ನಗರದಲ್ಲಿ ೪೦ ಹೊಸ ಕೊಳಚೆ ಪ್ರದೇಶಗಳು ನಿರ್ಮಾಣವಾಗಿವೆ. ಆದ್ದರಿಂದ ಇದನ್ನು ತೀವ್ರವಾಗಿ ಯೋಚನೆ ಮಾಡಿ ಕಾನೂನಿನಲ್ಲಿ ಏನಾದರೂ ದೋಷಗಳು ಇದ್ದರೆ ಅವುಗಳನ್ನು ಸರಿಪಡಿಸುವುದಕ್ಕೆ ದಾರಿ ಇದೆಯೇ ಎಂಬುದನ್ನು ನೋಡಬೇಕು. ಇಲ್ಲದಿದ್ದರೆ ಅದನ್ನು ತಡೆಯುವುದಕ್ಕೆ ಆಗುವುದಿಲ್ಲ. ಒಂದು ಕಡೆ ಕೊಳಚೆ ಪ್ರದೇಶವನ್ನು ನಿರ್ಮೂಲನ ಮಾಡಿ ಜೊಕ್ಕಟ ಮಾಡಿ ಕೊಂಡು ಹೋದರೆ ಮತ್ತೊಂದು ಕಡೆ ಬೆಳೆಯುತ್ತವೆ. ಆದ್ದರಿಂದ ಈ ಸಮಸ್ಯೆಯನ್ನು ಬಗೆಹರಿಸುವ ಕಡೆ ಗಮನ ತೆಗೆದುಕೊಳ್ಳುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ- ಸರ್ಕಾರ ಆ ಕಡೆ ಗಮನ ಕೊಟ್ಟು ಸೂಕ್ತ ಕ್ರಮ ತೆಗೆದು ಕೊಳ್ಳುತ್ತದೆ. ಮಾನ್ಯ ಸದಸ್ಯರು ಹೇಳಿದ್ದು ಸತ್ಯವಾದದ್ದು ಸರ್ಕಾರದವರು ಕೊಳಚೆ ಪ್ರದೇಶವನ್ನು ಒಂದುಕಡೆ ನಿರ್ಮೂಲನ ಮಾಡಿಕೊಂಡು ಹೋದ ಹಾಗೆ ಮತ್ತೊಂದು ಕಡೆ ಬೆಳೆಯುತ್ತಿವೆ. ಇದನ್ನು ರಿಸ್ಟ್ರಿಕ್ಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಕಾನೂನಿನ ಮಿತಿಯಲ್ಲಿ ಒಂದು ಹೊಸ ಕಾನೂನು ಮಾಡಿ ಇದನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತೇವೆ.

SRI S. S. ARAKERI.—May I know whether any proprietory rights is conferred on those people who have stayed in a particular site for more than 15 years?

MR. SPEAKER.—I request the Hon'ble Member to restrict the number of supplementaries.

SRI C. M. ARMUGAM.—May I submit that putting supplementaries on a question depends on the scope of the question. This question relating to slum clearance in Bangalore concerns a population of more than 16 lakhs. If other members are also permitted to put supplementaries, it will be good, because members coming from outside Bangalore are also interested in this.

MR. SPEAKER.—I agree. That is why I have permitted 3 or 4 members to put supplementaries. The Hon'ble member Sri Arakeri has put not less than 5 supplementaries.

SRI S. S. ARAKERI.—I want to know whether proprietory rights have been conferred on those who are staying for over 15 years in a particular area?

ಶ್ರೀ ಎಚ್. ಸಿ. ಶ್ರೀಕಂಠಯ್ಯ.— ಅಲ್ಲಿ ಎಲ್ಲರಿಗೂ ಸೈಟು ಕೊಡುವುದಕ್ಕೆ ಅವಕಾಶ ಇಲ್ಲದಿದ್ದರೆ ಕೆಲವು ಜನ ಹೊರಗಡೆ ಹೋಗಲೇಬೇಕು ಅವರಿಗೆ ಹೊರಗಡೆ ಸೈಟು ಕೊಟ್ಟು ಕಳುಹಿಸಿದರೆ ಅವರಿಗೆ ಅನುಕೂಲವಾಗುತ್ತದೆ. They should get sites means they should get them either in the place where they are put up or outside if land is not available them. Both of these things are these.

ಶ್ರೀ ಎಸ್. ಎಸ್. ಅರಕೇರಿ.– ೧೫ ವರ್ಷಕ್ಕಿಂತ ಹೆಚ್ಚು ಕಾಲ ಕೊಳಚೆ ಪ್ರದೇಶದಲ್ಲಿ ಜನ ಗುಡಿಸಲು ಕಟ್ಟಿಕೊಂಡು ವಾಸಮಾಡುತ್ತಿದ್ದಾರೆ. ಅಂಥವರಿಗೆ ಅಲ್ಲಿಯೇ ಸೈಟು ಕೊಟ್ಟು ಅವರಿಗೆ ಪ್ರೊಪ್ರೈಟರಿ ರೈಟು ಕೊಟ್ಟು ಅದನ್ನು ಅವರಿಗೆ ಕನ್‌ಫರ್ಮ್ ಮಾಡಬೇಕು ಎಂದು ಕೇಂದ್ರ ಸರ್ಕಾರದ ಆರ್ಡರ್ ಇದೆ. ಹೀಗಿರುವಾಗ ಬೆಂಗಳೂರು ಕೊಳಚೆ ಪ್ರದೇಶದಲ್ಲಿ ೧೫ ವರ್ಷಗಳಿಗಿಂತಲೂ ಜಾಸ್ತಿ ವಾಸವಾಗಿರುವವರನ್ನು ಬೆಂಗಳೂರು ಹೊರಗಡೆ ಸೈಟು ಕೊಟ್ಟು ಕಳುಹಿಸಿದ್ದಾರೆ. ಇದರಿಂದ ಆ ಜನಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಕೊಟ್ಟು ಇದನ್ನು ತಡೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅವರಿಗೆ ಬೆಂಗಳೂರು ನಗರದಿಂದ ಹೊರಗಡೆ ಸೈಟು ಕೊಟ್ಟು ಕಳುಹಿಸುವುದಾದರೆ ಅವರಿಗೆ ಅಲ್ಲಿ ಒಳ್ಳೆಯ ಗಾಳಿ ಮತ್ತು ಒಳ್ಳೆಯ ಹವಾ ಸಿಕ್ಕುತ್ತದೆ. ಅದರಿಂದ ತೊಂದರೆಯೇನೂ ಇಲ್ಲ. ಅವರಿಗೆ ಉತ್ತಮವಾದ ಸೈಟು ಕೊಟ್ಟು ಕಾಲೋನಿಗಳನ್ನು ಮಾಡಿ ಮನೆಗಳನ್ನು ಕಟ್ಟಿಸಿಕೊಟ್ಟು ಅನುಕೂಲ ಮಾಡಿಕೊಡುವಾಗ ಅವರು ಗಲೀಜು ಜಾಗವಲ್ಲಿ ವಿತಕ್ಕೆ ಇರಬೇಕು ? ಸಾಧ್ಯವಾದ ಮಟ್ಟಿಗೆ ೧೫–೨೦ ವರ್ಷಗಳಿಂದ ಅಲ್ಲೇ ವಾಸವಾಗಿರುವವರಿಗೆ ಅವರಿಗೆ ಖಂಡಿತವಾಗಿಯೂ ಸೈಟು ಕೊಡುತ್ತೇವೆ. ಅಲ್ಲಿ ಸೈಟು ಸಾಲದೇ ಬಂದಾಗ ಅವರು ಹೊರಗಡೆ ಹೋಗಬೇಕಾಗುತ್ತದೆ.

Request to supply printed Question & Answers two hours before the commencement of the Question Hour

ಶ್ರೀ ಸಿ. ಎಂ. ಇಬ್ರಾಹಿಂ.—ಸ್ವಾಮಿ, ಪಾಯಿಂಟ್ ಆಫ್ ಆರ್ಡರ್. ಪ್ರಶ್ನೋತ್ತರ ವೇಳೆಗಿಂತ ಎರಡು ಗಂಟೆ ಮುಂಚೆ ಪ್ರಶ್ನೆಗಳಿಗೆ ಉತ್ತರವನ್ನು ಕೊಡಿ ಎಂದು ನಾವು ಕೇಳುತ್ತಿದ್ದೇವೆ. ಆ ರೀತಿ ಕೊಡದಿದ್ದರೆ ನಾವು ಸಪ್ಲಿಮೆಂಟರಿ ಪ್ರಶ್ನೆ ಹಾಕುವುದು ಹೇಗೆ ? ಈಗ ನಮ್ಮ ಟೇಬಲ್ ಮೇಲೆ ಪ್ರಶ್ನೆಗಳಿಗೆ ಉತ್ತರವನ್ನು ಇಟ್ಟರೆ ನಾವು ಸಪ್ಲಿಮೆಂಟರಿ ಪ್ರಶ್ನೆಗಳನ್ನು ತಯಾರು ಮಾಡುವುದಕ್ಕಾಗುತ್ತದೆಯೇ ?